**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ ನ್ಯಾಯಾಲಯ, ಮದ್ದೂರು.**

**ಸಿಸಿ 1946/2023**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಪರಮಾನಂದ ಬೂದಿಯಾಳ | ಚಾ.ಸಾ.-3 |
| ತಂದೆ ಹೆಸರು | - | ಹನಮಂತ ಬೂದಿಯಾಳ ಲೇ ಕೆ.ಆರ್ ನಾಗಯ್ಯ | ಫ್ರಾ.ಸಾ.-3 |
| ವಯಸ್ಸು | - | 34 ವರ್ಷ | |
| ಉದ್ಯೋಗ | - | ಪೊಲೀಸ್ ಪೇದೆ | |
| ವಾಸ ಸ್ಥಳ | - | ಮದ್ದೂರು | |

ದಿನಾಂಕಃ 29-09-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಅಭಿಯೋಜನೆಯ ಪರಃ ಎ ಪಿ ಪಿ ರವರಿಂದಃ**

ನಾನು 2018 ರಿಂದ 2023 ರವರೆಗೆ ಮದ್ದೂರು ಪೋಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆ ಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 29-08-2023 ರಂದು ಬೆಳಿಗ್ಗೆ 08-00 ಗಂಟೆ ಸಮಯದಲ್ಲಿ ನಾನು ಠಾಣಾಯಲ್ಲಿದ್ದಾಗ ನನ್ನನ್ನು ಚಾ.ಸಾ. 2 ರವರು ಪಿ ಎಸ್ ಐ ರವರು ಕರೆದು ಮದ್ದೂರು ಟೌನಿನ ಕೆನರಾ ಬ್ಯಾಂಕ್ ಹತ್ತಿರದ ವೆಂಕಟೇಶ್ವರ ವೈನ್ಸ್ ಖಾಲಿ ಜಾಗದಲ್ಲಿ ಒಬ್ಬ ಅಸಾಮಿ ಒಂದು ಚೀಲದಲ್ಲಿ ಮಧ್ಯವನ್ನು ತುಂಬಿಕೊಂಡು ಅಕ್ರಮವಾಗಿ ಮಾರಾಟ ಮಾಡುತ್ತಿದ್ದಾನೆಂದು ಬಾತ್ಮೀದಾರರಿಂದ ಮಾಹಿತಿ ಬಂದಿದು ಸದರಿ ಸ್ಥಳದ ಮೇಲೆ ದಾಳಿ ಮಾಡುವಂತೆ ತಿಳಿಸಿರುತ್ತಾರೆ ಅದರಂತೆ ನಾವು ಇಲಾಖಾ ಜೀಪಿನಲ್ಲಿ ಬಂದು ಮದ್ದೂರು ಕೆ ಎಸ್ ಆರ್ ಟಿ ಸಿ ಬಸ್ ನಿಲ್ದಾಣದ ಬಳಿ ಬಂದು ಚಾಸಾ-4 ಮತ್ತು 5 ರವರಿಗೆ ಈ ಕೇಸಿನ ವಿಚಾರ ತಿಳಿಸಿ ದಾಳಿ ಸಮಯದಲ್ಲಿ ಪಂಚರಾಗಿ ಸಹಕರಿಸುವಂತೆ ಕೋರಿಕೊಂಡಿರುತ್ತಾರೆ ಅವರುಗಳು ಒಪ್ಪಿ ಇಲಾಖಾ ಜೀಪಿನಲ್ಲಿ ಬಂದಿರುತ್ತಾರೆ. ಬೆಳಿಗ್ಗೆ 08-30 ಕ್ಕೆ ಘಟನಾ ಸ್ಥಳಕ್ಕೆ ಹೋಗಿ ನೋಡಲಾಗಿ ಒಬ್ಬ ಅಸಾಮಿ ಮಧ್ಯವನ್ನು ಒಂದು ಚೀಲದಲ್ಲಿಟ್ಟುಕೊಂಡು ಮಾರಾಟ ಮಾಡುತ್ತಿದ್ದು ಕಂಡು ಬಂದಿದ್ದು, ನಾವು ಘಟನಾ ಸ್ಥಳಕ್ಕೆ ಹೋದಾಗ ಮಧ್ಯ ಖರೀದಿಸುತ್ತಿದ್ದ ಸಾರ್ವಜನಿಕರು ನಮ್ಮನ್ನು ನೋಡಿ ಓಡಿ ಹೋಗಿರುತ್ತಾರೆ. ಸದರಿ ಅಸಾಮಿ ಹಿಡಿದು ಆತನ ಚೀಲವನ್ನು ಪರಿಶೀಲನೆ ಮಾಡಿ ಅದರಲ್ಲಿ 90 ಎಂ ಎಲ್ ಸಿಲ್ವರ್ ಕಪ್ ಬ್ರಾಂದಿ 34 ಪ್ಯಾಕೇಟ್ ಗಳು ಇದ್ದವು, ಸದರಿ ಅಸಾಮಿ ಹೆಸರು ಗಿರೀಶ್ ಕೆ ಎಸ್ ಬಿನ್ ಸಿದ್ದೇಗೌಡ, ಕುದೂರು ಗುಂಡಿ ಗ್ರಾಮ ಎಂದು ತಿಳಿಸಿರುತ್ತಾರೆ ನಂತರ ಆತನ ಬಳಿ ಮಧ್ಯ ಮಾರಾಟ ಮಾಡಲು ಪರವಾನಿಗೆ ಇದೆಯೇ ಎಂದು ಕೇಳಲಾಗಿ ಆತ ತನ್ನ ಬಳಿ ಯಾವುದೇ ಪರವಾನಿಗೆ ಇಲ್ಲ ಎಂದು ತಿಳಿಸಿರುತ್ತಾರೆ. ನಂತರ ಚಾಸಾ-1 ರವರು ಘಟನಾ ಸ್ಥಳದಲ್ಲೇ ಲ್ಯಾಪ್ ಟಾಪ್ ನಲ್ಲಿ ಸ್ವ ವರದಿ ತಯಾರಿಸಿ ನನ್ನ ಹಸ್ತ ಪ್ರಕರಣ ದಾಖಲಿಸಿ ಕೋರಿ ಠಾಣೆಗೆ ಕಳುಹಿಸಿಕೊಟ್ಟಿರುತ್ತಾರೆ. ಅದರಂತೆ ನಾನು ಬೆಳಿಗ್ಗೆ 09-15 ಗಂಟೆ ಸಮಯದಲ್ಲಿ ಠಾಣಾ ಉಸ್ತುವಾರಿಯಲ್ಲಿದ್ದ ಚಾಸಾ-8 ರವರಿಗೆ ವರದಿ ನೀಡಿ, ಅವರ ಪ್ರಕರಣ ದಾಖಲಿಸಿದ ಮೊಕದ್ದಮೆ

ಸಂಖ್ಯೆ: 305/2023 ರಂತೆ ಪ್ರಕರಣ ದಾಖಲಾಗಿರುವ ಬಗ್ಗೆ ಮಾಹಿತಿ ನೀಡಿರುತ್ತೇನೆ. ಅದೇ ದಿನ ತನಿಖಾಧಿಕಾರಿ ಮುಂದೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿ ಆರೋಪಿಯನ್ನು ನಾನು ನೋಡಿದರೆ ಗುರುತಿಸುತ್ತೇನೆ. ಆದರೆ ಈ ದಿನ ಆರೋಪಿ ಗೈರು ಹಾಜರಿದ್ದು, ಆರೋಪಿಯನ್ನು ಗುರುತಿಸಲು ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ತಿಳಿಸಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದೆಯಿರುವ 90 ಎಂ ಎಲ್ ನ ಅಮೃತ್ ಸಿಲ್ವರ್ rare indian cup Brandy 34 ಪ್ಯಾಕೇಟ್ಗಳನ್ನು ಗುರುತಿಸಿದ್ದು ಅವುಗಳನ್ನು ಮು ಮಾ-1 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು ಆರೋಪಿ ಪರ ವಕೀಲರು: ಶ್ರೀ ಎಂ ಎಂ ಎಂ ರವರಿಂದ</u>**

ಚಾಸಾ-1 ನನ್ನ ಮೇಲಾಧಿಕಾರಿ ಅವರ ಆದೇಶವನ್ನು ಪಾಲಿಸುತ್ತೇನೆ. ಆ ದಿನ ನಾನು ಠಾಣೆಯಲ್ಲಿದ್ದೆ. ಚಾಸಾ-1 ರವರೇ ಆ ದಿನ ನಮಗೆ ಮಾಹಿತಿ ನೀಡಿರುತ್ತಾರೆ. ಮಹಜರ್ ಮಾಡಿದ ಸ್ಥಳದ ಅಕ್ಕಪಕ್ಕ ಸುಮಾರು ಅಂಗಡಿಗಳು ಇವೆ ಎಂದರೆ ಸರಿ. ಅಕ್ಕಪಕ್ಕದಲ್ಲಿದ್ದ ವ್ಯಕ್ತಿಗಳಿಗೆ ಮಹಜರ್ ಹಾಜರಾಗಲು ನೋಟಿಸ್ ಕೊಟ್ಟಿಲ್ಲ ಮೌಖಿಕವಾಗಿ ತಿಳಿಸಿರುತ್ತೇವೆ. ಮಹಜರ್ ಸ್ಥಳ ವೆಂಕಟೇಶ್ವರ ಬಾರ್ ಮತ್ತು ಶಿಂಷಾ ಬಾರ್ ಮಧ್ಯದಲ್ಲಿದೆ ಎಂದರೆ ಸರಿ. ಖಾಲಿ ಜಾಗದಲ್ಲಿ ಆರೋಪಿ ಮದ್ಯವನ್ನು ಮಾರಾಟ ಮಾಡುತ್ತಿದ್ದ. ಮದ್ಯ ಖರೀದಿ ಮಾಡಿದ ವ್ಯಕ್ತಿಗಳನ್ನು ಹಿಡಿಯಲು ಪ್ರಯತ್ನಿಸಿರುತ್ತೇವೆ ಅವರು ಸಿಕ್ಕಿರುವುದಿಲ್ಲ. ಆರೋಪಿ ಆ ದಿನ ಯಾವುದೇ ಮದ್ಯವನ್ನು ಮಾರಾಟ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿಯಿಂದ ಯಾವುದೇ ಮದ್ಯವನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಮುದ್ದೆ ಮಾಲ್ ಗಳು ಮದ್ಯದ ಅಂಗಡಿಯಲ್ಲಿ ಸಿಗುತ್ತವೆ ಎಂದರೆ ಸರಿ. ಆರೋಪಿ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ: ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ )

ಓ ಹೇ ಕೇ ಸರಿಯಾಗಿದೆಯೆಂದು ಒಪ್ಪಿರುತ್ತಾರೆ.

2 ನೇ ಅಪರ ಸಿವಿಲ್ ನ್ಯಾಯಾಧೀಶರು

ಸಾಕ್ಷಿ ಸಹಿ ಮತ್ತು ಜೆ ಎಂ ಎಫ್ ಸಿ , ಮದ್ದೂರು.